ಬೆಳೆದಿರುವುದರಿಂದ ನೀವು ಶಿಕ್ಷಾರ್ಹರು ಎಂದು ಹೇಳಿ ಹತ್ತುಪಟ್ಟು ದಂಡ ಅಂದರೆ ಎಕರೆ 1ಕ್ಕೆ ರೂ. 350-00 ದಂಡ ಹಾಕಿರುತ್ತಾರೆ. ಇದರಿಂದ ರೈತರಿಗೆ ಅನ್ಯಾಯವಾಗಿರುವುದರಿಂದಲೂ, ಜಲಾಶಯ ನಿರ್ಮಾಣ ಮಾಡುವಾಗ ಆಚ್ಚುಕಟ್ಟು ಪ್ರಾರಂಭದಿಂದ 50 ಸಾವಿರ ಎಕರೆ ಭತ್ತ ಎಂತಲೂ ಉಳಿದ ಆಚ್ಚುಕಟ್ಟು ಆರೆ ಖುಷ್ಕಿ ಬೆಳೆ ಬೆಳೆಯಬೇಕೆಂಬ ನಿಬಂಧನೆ ಇರುತ್ತದೆ. ಆದರೆ ಜಲಾಶಯದಲ್ಲಿ ಅತಿ ಹೆಚ್ಚಿನ ಪ್ರಮಾಣದ ನೀರಿರುವುದರಿಂದ ಕೇವಲ 50 ಸಾವಿರ ಎಕರೆ ಪ್ರದೇಶದಲ್ಲಿ ಮಾತ್ರ ಭತ್ತ ಬೆಳೆಯಬೇಕೆಂಬ ನಿಬಂಧನೆಯನ್ನು ಸಡಿಲಿಸುವ ಮುಖಾಯಂತರ ಈಗಿನ ದಂಡವನ್ನು – ತಪ್ಪಿಸಬೇಕೆಂದು ಮಾನ್ಯ ಕಂದಾಯ ಸಚಿವರನ್ನು ರೈತರ ಹಿತದೃಷ್ಟಿಯಿಂದ ಆಗ್ರಹಪಡಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಕಬಿನಿ ಬಂದಂತೆ ನಾಲೆಯಲ್ಲಿ ವಿತರಣಾ ನಾಲೆ 1 ರಿಂದ 40 ರವರೆಗಿನ ಆಚ್ಚುಕಟ್ಟು ಪ್ರದೇಶದಲ್ಲಿ ಭತ್ತವನ್ನು ಬೆಳೆಯುವುದೆಂದು ಮತ್ತು ವಿತರಣಾ ನಾಲೆ 41ರಿಂದ 60ರವರೆಗೆ ಆರೆ ಖುಷ್ಕಿ ಬೆಳೆಯುವುದೆಂದು ನಿರ್ಮಾನಿಸಿ ನಾಲೆಯ ವಿನ್ಯಾಸವನ್ನು ಇದಕ್ಕೆ ಅನುಗುಣವಾಗಿ ತಯಾರಿಸಲಾಗಿದೆ. ವಿತರಣಾ ನಾಲೆ 43ರವರೆಗೆ 1986ರಲ್ಲಿ ನೀರನ್ನು ಹಾಯಿಸಿದ್ದು, ಆ ಸಾಲಿನಿಂದ 5 ವರ್ಷಗಳವರೆಗೆ ನಿಯಮದ ಪ್ರಕಾರ ನೀರಾವರಿ ಕರವನ್ನು ವಿಧಿಸಿರುವುದಿಲ್ಲ. 1991ನೇ ಸಾಲಿನಲ್ಲಿ 42ನೇ ವಿತರಣಾ ನಾಲೆಯಲ್ಲಿ ಸೂಚನೆ (ನೋಟಿಫಿಕೇಶನ್)ಗೆ ವಿರುದ್ಧವಾಗಿ 11,800 ಎಕರೆ ಪ್ರದೇಶದಲ್ಲಿ ಭತ್ತ ಬೆಳೆಯಲಾಗಿದೆ. ಈ ಕ್ರಮವು ಅಧಿಕೃತವಾಗಿ ಸೂಚಿಸಿದ ನಿಯಮದ ಉಲ್ಲಂಘನೆಯಾಗಿದ್ದು, ನಿಯಮಾವಳಿ ಪ್ರಕಾರ ದಂಡ ಕರವನ್ನು ವಿಧಿಸಲಾಗಿದೆ.

ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ನೌಕರರ ಅಧಿಕಾರಿಗಳಿಗೆ ಮುಂಬಡ್ತಿ

ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) : ಮಾನ್ಯ ಅಧ್ಯಕ್ಷಣಿಯವರೇ, ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ನೌಕರ ಅಧಿಕಾರಿಗಳನ್ನು ಅದರಲ್ಲೂ ಮುಖ್ಯವಾಗಿ ಜಂಟಿ ನಿರ್ದೇಶಕರುಗಳಿಗೆ ಮುಂಬಡ್ತಿ ನೀಡಲು ಹಾಲಿ ದರ್ಜೆ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶವಿದ್ದರೂ ಇಲಾಖೇತರ ಸಿಬ್ಬಂದಿಯನ್ನು ಅವರವರ ಮಾತೃ ಇಲಾಖೆಗೆ ವಾಪಸ್ಸು ಕಳುಹಿಸಿ ಇಲಾಖಾ ನೌಕರರ ಅಧಿಕಾರಿಗಳಿಗೆ ಮುಂಬಡ್ತಿ ನೀಡದಿರುವುದರಿಂದ ಅವರಿಗೆ ಉಂಟಾಗುತ್ತಿರುವ ಅನ್ಯಾಯದ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಉಪಾಧ್ಯಕ್ಷಣಿಯವರೇ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು 1982ರಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ ಎಸ್‌ಡಬ್ಲ್ಯೂಎಲ್ 3 ಬಿಇಟಿ 78 (11)ರಲ್ಲಿ ಅನುಮೋದಿತವಾಗಿದೆ. ಈ ನಿಯಮಗಳ ಪರಿಷ್ಕರಣೆ ಸರ್ಕಾರದ ಪರಿಶೀಲನೆಯಲ್ಲಿದೆ. ಇಲಾಖಾ ಅಧಿಕಾರಿಗಳಿಗೆ ಈ ನಿಯಮಗಳ ಪರಿಷ್ಕರಣೆಯ ನಂತರ ಬಡ್ತಿ ನೀಡುವುದನ್ನು ಪರಿಗಣಿಸಲಾಗುವುದು.

ಹಾಲಿ ಕರ್ನಾಟಕ ಆಡಳಿತ ಸೇವೆಯ (ಹಿರಿಯ ಶ್ರೇಣಿಯ) ಅಧಿಕಾರಿಗಳು ಜುಟಿ ನಿರ್ದೇಶಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಆಡಳಿತ ಹಿತದೃಷ್ಟಿಯಿಂದ ಈ ಅಧಿಕಾರಿಗಳನ್ನು ಇಲಾಖಾ ವ್ಯಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸುವವರಗೆ ಮುಂದುವರಿಸುವುದು ಅವಶ್ಯವಾಗಿದೆ. ಈ ಕಾರಣಗಳಿಂದ ಇಲಾಖೆಯ ಅಧಿಕಾರಿಗಳಿಗೆ ಬಡ್ತಿ ಪಡೆಯುವಲ್ಲಿ ಅನ್ಯಾಯವಾಗಿದೆ ಎನ್ನುವುದಾಗಿ ಹೇಳುವುದು ಸರಿಯಲ್ಲ.

ನಿರುದ್ಯೋಗಿ ವೈದ್ಯಕೀಯ ಪದವೀಧರರಿಗೆ ಗ್ರಾಮೀಣ ಪ್ರದೇಶದಲ್ಲಿ ನರ್ಸಿಂಗ್ ಹೋಂಗಳನ್ನು ಕಟ್ಟಲು ಕರ್ನಾಟಕ ಹಣಕಾಸು ಸಂಸ್ಥೆಯಿಂದ ಕಡಿಮೆ ಬಡ್ಡಿ ದರದಲ್ಲಿ ಸಾಲ.

SRI SADATH ALI KHAN (CHANNAPATNA) : The Hon'ble Chief Minister be pleased to state that :

a) What are the financial schemes to encourage Private practitioners and unemployed Medical Graduates to look after the health of the public in rural areas apart from government agencies;

b) Why the Nursing Homes constructed in rural areas are not getting less interest rate and subsidies, while other projects like hotels and industries are getting ;

c) The number of persons taken loan from K.S.F.C. in Bangalore Rural District and City for construction of hospitals from 8-1-91 to 9-10-91 the names and other details may be furnished ;

d) How many sanctioned projects from KSFC have refinanced from IDBI from 8-1-91 to 9-10-91 ;

e) What are the norms and duration of IDBI to refinance after the loan sanctioned by KSFC ;

f) Why Dr. B.L. Jayaram, B.J.L. Polyclinic and Nursing Home, Channapatna has not been refinanced by IDBI even after 8 months of sanctioned loan from KSFC on 13-2-91 ; the increased rate of interest applicable for fresh applicants on or after 9-10-91 ;

g) Whether it is a fact that the KSFC has not credited the amount to IDBI at the time of increasing the rate of interest ;

h) Whether it is a fact that Dr. B.L. Jayaram is not liable to pay the increased rate of interest for the sanctioned loan of KSFC which has been sanctioned on 13-2-1991.

i) Why there is no difference between rural and urban in fixing up of interest rate for sanction of loans from KSFC for construction of hospitals.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷೀಣೆಯವರೆ, ಮಾನ್ಯ ಸಾದತ್ ಆಲಿಖಾನ್‌ರವರು ಹೇಳಿದಹಾಗೆ ನಿರುದ್ಯೋಗಿ